# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 993

ಮಾನ್ಯ ವಿಧಾನ ಪರಿಷತ್ತು ಸದಸ್ಯರ ಹೆಸರು : ಶ್ರೀ ಅರವಿಂದ್ ಕುಮಾರ್ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 27.12.2022

ಉತ್ತರಿಸುವವರು : ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯಲ್ಲಿ 2019-20ರಿಂದ 2022-23ರವರೆಗೆ ಸರ್ವೆ ಮಾಡಿದ ವಿಕಲಚೇತನರ ಜನ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು.) | 2011ರ ಜನಗಣತಿಯ ಪ್ರಕಾರ ಬೀದರ್ ಜಿಲ್ಲೆಯಲ್ಲಿ 42637 ವಿಕಲಚೇತನರು ಇರುತ್ತಾರೆ. |
| ಆ) | ಎಷ್ಟು ಸಂಖ್ಯೆಯ ಜನ ವಿಕಲಚೇತನರಿದ್ದಾರೆ ಅವರ ಸಬಲೀಕರಣಕ್ಕಾಗಿ ಸರ್ಕಾರ ಯಾವ ಯೋಜನೆಗಳನ್ನು ಹಮ್ಮಿಕೊಂಡಿದೆ; ಯೋಜನೆಗಳ ವಿವರಗಳಾವುವು; | 2011ರ ಜನಗಣತಿಯ ಪ್ರಕಾರ ಬೀದರ್ ಜಿಲ್ಲೆಯಲ್ಲಿ 42637 ವಿಕಲಚೇತನರು ಇದ್ದಾರೆ. ವಿಕಲಚೇತನರ ಸಬಲೀಕರಣಕ್ಕಾಗಿ ಸರ್ಕಾರ ಹಮ್ಮಿಕೊಂಡಿರುವ ಯೋಜನೆಗಳ ವಿವರಗಳನ್ನು ಅನುಬಂಧ-01ರಲ್ಲಿ ಒದಗಿಸಲಾಗಿದೆ. |
| ಇ) | ಈ ಯೋಜನೆಗಳಲ್ಲಿ ಎಷ್ಟು ಫಲಾನುಭವಿಗಳಿಗೆ ಯಾವ ಯಾವ ಸಹಾಯ ಕಲ್ಪಿಸಲಾಗಿದೆ; (ವರ್ಷವಾರು ತಾಲ್ಲೂಕುವಾರು ವಿವರ ನೀಡುವುದು) | ವಿವಿಧ ಯೋಜನೆಗಳಡಿ ಪ್ರಯೋಜನ ಪಡೆದ ಫಲಾನುಭವಿಗಳ ವರ್ಷವಾರು ಮತ್ತು ತಾಲ್ಲೂಕುವಾರು ಪಟ್ಟಿಯನ್ನು ಅನುಬಂಧ-02ರಲ್ಲಿ ಒದಗಿಸಲಾಗಿದೆ |
| ಈ) | ಯೋಜನೆಗಳಲ್ಲಿ ಫಲಾನುಭವಿಗಳ ಆಯ್ಕೆ ಮಾಡುವ ಅಧಿಕಾರವನ್ನು ಯಾರು ಹೊಂದಿರುತ್ತಾರೆ; ಇದಕ್ಕಾಗಿ ಆಯ್ಕೆ ಸಮಿತಿ ಇದೆಯೆ; (ಇದ್ದಲ್ಲಿ, ಮಾಹಿತಿ ನೀಡುವುದು) | 1. ಆಧಾರ ಸಾಲಿ ಯೋಜನೆ ಮತ್ತು ರೆಟ್ರೋಫಿಟೆಡ್ ಯಂತ್ರಚಾಲಿತ ದ್ವಿಚಕ್ರ ವಾಹನ ಯೋಜನೆ ಮತ್ತು ವೈದ್ಯಕೀಯ ಪರಿಹಾರ ನಿಧಿ ಯೋಜನೆಯಡಿ ಫಲಾನುಭವಿಗಳನ್ನು ಆಯ್ಕೆ ಮಾಡಲು ಆಯಾ ಜಿಲ್ಲೆಯ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದೆ.<br>2. ಅಂಧ ವಿದ್ಯಾರ್ಥಿಗಳಿಗೆ ಟಾಕಿಂಗ್ ಲ್ಯಾಪ್‌ಟಾಪ್ ನೀಡುವ ಯೋಜನೆಯ ಫಲಾನುಭವಿಗಳನ್ನು ಆಯ್ಕೆ ಮಾಡಲು ಆಯಾ ಜಿಲ್ಲೆಯ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿಯನ್ನು ರಚಿಸಲಾಗಿದೆ<br>3. ಶ್ರವಣದೋಷವುಳ್ಳವರಿಗೆ ಹೊಲಿಗೆ ಯಂತ್ರ ನೀಡುವ ಯೋಜನೆ ಮತ್ತು ಅಂಧರಿಗೆ ಬ್ರೈಲ್‌ಕಿಟ್ ನೀಡುವ ಯೋಜನೆಯಡಿ ಫಲಾನುಭವಿಗಳನ್ನು ಆಯ್ಕೆ ಮಾಡಲು ಆಯಾ ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿಯನ್ನು ರಚಿಸಲಾಗಿದೆ.<br>4. ಉಳಿದ ಯೋಜನೆಗಳ ಫಲಾನುಭವಿಗಳನ್ನು ಆಯವ್ಯಯ ಲಭ್ಯತೆಗೆ ಅನುಗುಣವಾಗಿ ಆಯಾ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳೇ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುತ್ತಾರೆ. |
| ಉ) | ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಅಥವಾ ಫಲಾನುಭವಿಗಳ ಹೆಸರು ಸೂಚಿಸಲು ಶಾಸಕರುಗಳಿಗೆ ಅವಕಾಶವಿದೆಯೇ ಅಥವಾ ಇಲ್ಲವೇ? | ಮಾನ್ಯ ಶಾಸಕರು ಸೂಚಿಸುವ ಫಲಾನುಭವಿಗಳು ಯೋಜನೆಗಳ ಮಾರ್ಗಸೂಚಿಗಳಿಗೆ ಅನುಗುಣವಾಗಿ ಅರ್ಹತೆ ಹೊಂದಿದ್ದಲ್ಲಿ ಆಯ್ಕೆ ಸಮಿತಿಗಳು ಮತ್ತು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಸದರಿಯವರನ್ನು ಆಯ್ಕೆಗೆ ಪರಿಗಣಿಸಲು ಅವಕಾಶ ಇರುತ್ತದೆ. |

**ಸಂಖ್ಯೆ: ಮಮಇ 282 ಪಿಹೆಚ್‌ಪಿ 2022**

(ಆಚಾರ್ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ ಹಾಗೂ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ ಸಚಿವರು.

# ಅನುಬಂಧ-01

1. **ಆಧಾರಯೋಜನೆ :**

ವಿಕಲಚೇತನರು ಸ್ವಯಂ ಉದ್ಯೋಗ ಕೈಗೊಂಡು ಜೀವನ ಸಾಗಿಸಲು ಅನುಕೂಲವಾಗುವಂತೆ ಆಧಾರ ಸಾಲ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಶೇ.50ರಷ್ಟು ಬ್ಯಾಂಕ್ ಸಾಲ ಮತ್ತು ಶೇ.50ರಷ್ಟು ಸಹಾಯಧನವನ್ನು ಇಲಾಖೆಯಿಂದ ನೀಡಲಾಗುತ್ತದೆ.

2. **ತೀವ್ರತೆರನಾದ ದೈಹಿಕ ವಿಕಲಚೇತನರಿಗೆ ಯಂತ್ರಚಾಲಿತ ದ್ವಿಚಕ್ರವಾಹನ ಯೋಜನೆ :**

20 ರಿಂದ 60 ವರ್ಷದ ವಯೋಮಾನದ ತೀವ್ರತೆರನಾದ ದೈಹಿಕ ವಿಕಲಚೇತನರಿಗೆ ಓಡಾಡಲು ಅನುಕೂಲವಾಗುವಂತೆ ಜೀವಿತಕಾಲದಲ್ಲಿ ಒಂದು ಬಾರಿಗೆ ಯಂತ್ರಚಾಲಿತ ದ್ವಿಚಕ್ರ ವಾಹನವನ್ನು ಮಂಜೂರು ಮಾಡಲಾಗುತ್ತದೆ. ಈ ಯೋಜನೆಯಡಿ ಫಲಾನುಭವಿಯ ಕುಟುಂಬದ ವಾರ್ಷಿಕ ವರಮಾನ ರೂ.2.00 ಲಕ್ಷಗಳಿಗಿಂತ ಕಡಿಮೆ ಇರಬೇಕಾಗಿರುತ್ತದೆ.

3. **ವಿಕಲಚೇತನ ವ್ಯಕ್ತಿಗಳನ್ನು ಸಾಮಾನ್ಯರು ಮದುವೆಯಾದಲ್ಲಿ ಪ್ರೋತ್ಸಾಹಧನ ನೀಡುವ ಯೋಜನೆ:**

ವಿಕಲಚೇತನ ಯುವಕ/ಯುವತಿಯರನ್ನು ವಿವಾಹವಾಗುವ ಸಾಮಾನ್ಯ ಯುವಕ/ ಯುವತಿಯರಿಗೆ ನಿರಂತರವಾಗಿ ಮಾಸಿಕ ಆದಾಯ ದೊರಕಿಸಲು ವಿಕಲಚೇತನ ವ್ಯಕ್ತಿಯ ಹೆಸರಿನಲ್ಲಿ ರೂ.50,000/-ಗಳನ್ನು ಮದುವೆಯಾದ ಸಾಮಾನ್ಯ ವ್ಯಕ್ತಿ ಹಾಗೂ ವಿಕಲಚೇತನರ ಜಂಟಿ ಹೆಸರಿನಲ್ಲಿ 05 ವರ್ಷದ ಅವಧಿಗೆ ಹೂಡಿಕೆಯ ರೂಪದಲ್ಲಿ ನೀಡಿ ಪ್ರೋತ್ಸಾಹ ನೀಡಲು ಹಾಗೂ ಅದರಿಂದ ಬರುವ ಬಡ್ಡಿ ಹಣವನ್ನು ಉಪಯೋಗಿಸುವುದು ಹಾಗೂ 05 ವರ್ಷಗಳ ನಂತರ ಠೇವಣಿ ಮೊತ್ತವನ್ನು ವಾಪಸ್ಸು ಪಡೆಯಬಹುದು ಅಥವಾ ಮುಂದುವರೆಸಲು ಅವಕಾಶವಿರುತ್ತದೆ.

4. **ಅಂಧ ವಿದ್ಯಾರ್ಥಿಗಳಿಗೆ ಟಾಕಿಂಗ್ ಲ್ಯಾಪ್‌ಟಾಪ್ ಯೋಜನೆ :**

ಎಸ್.ಎಸ್.ಎಲ್.ಸಿ ನಂತರ ವ್ಯಾಸಂಗ ಮಾಡುವ ದೃಷ್ಟಿದೋಷವುಳ್ಳ ವಿಕಲಚೇತನ ವಿದ್ಯಾರ್ಥಿಗಳು ಇತ್ತೀಚಿನ ತಂತ್ರಜ್ಞಾನ ಮತ್ತು ತಂತ್ರಾಂಶದ ಉಪಯೋಗದಿಂದ ಉನ್ನತ ಶಿಕ್ಷಣವನ್ನು ಪಡೆಯಲು ಅನುಕೂಲವಾಗುವಂತೆ ಮಾತನಾಡುವ (ಟಾಕಿಂಗ್) ಲ್ಯಾಪ್‌ಟಾಪ್‌ಗಳನ್ನು ಅರ್ಹ ಫಲಾನುಭವಿಗಳಿಗೆ ನೀಡಲಾಗುತ್ತಿದೆ.

5. **ಅಂಗವಿಕಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹಧನ:**

ಈ ಯೋಜನೆಯಡಿ ಒಂದನೇ ತರಗತಿಯಿಂದ ಸ್ನಾತಕೋತ್ತರ ಪದವಿಯವರೆಗೆ ವ್ಯಾಸಂಗ ಮಾಡುತ್ತಿರುವ ಅರ್ಹ ವಿಕಲಚೇತನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಆಯಾ ಜಿಲ್ಲಾ ಕಛೇರಿಗಳ ಮೂಲಕ ಮಂಜೂರು ಮಾಡಲಾಗುತ್ತಿದೆ. ಈ ಯೋಜನೆಯ ಫಲಾನುಭವಿಗಳಿಗೆ ಆದಾಯ ಮಿತಿಯಿಂದ ವಿನಾಯಿತಿಗೊಳಿಸಲಾಗಿದೆ.

6. **ಉನ್ನತ ಶಿಕ್ಷಣ ಪಡೆಯುವ ವಿಕಲಚೇತನರಿಗೆ ಶುಲ್ಕ ಮರುಪಾವತಿ:**

ಉನ್ನತ ಶಿಕ್ಷಣ ಪಡೆಯುವ ವಿಕಲಚೇತನರಿಗೆ ಎಸ್.ಎಸ್.ಎಲ್.ಸಿ ನಂತರ ಉನ್ನತ ಶಿಕ್ಷಣ, ವೃತ್ತಿ ಶಿಕ್ಷಣ, ತಾಂತ್ರಿಕ ಶಿಕ್ಷಣ, ಸ್ನಾತಕೋತ್ತರ, ಔದ್ಯೋಗಿಕ ಶಿಕ್ಷಣಗಳಿಗೆ ನಿಯಮಾನುಸಾರ ಆಯ್ಕೆಯಾಗುವ ವಿದ್ಯಾರ್ಥಿಗಳಿಗೆ ಸರ್ಕಾರವು ನಿಗದಿಪಡಿಸಿರುವ ಪರೀಕ್ಷಾ ಶುಲ್ಕ ಬೋಧನಾ ಶುಲ್ಕ, ಪ್ರಯೋಗಾಲಯ ಶುಲ್ಕ, ಕ್ರೀಡಾ ಶುಲ್ಕ ಹಾಗೂ ಗ್ರಂಥಾಲಯ ಶುಲ್ಕಗಳನ್ನು ಮರುಪಾವತಿಸುವ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಸೌಲಭ್ಯ ಪಡೆಯುವ ವಿದ್ಯಾರ್ಥಿಗಳಿಗೆ ಯಾವುದೇ ಆದಾಯ ಮಿತಿ ಇರುವುದಿಲ್ಲ.

7. **ಅಂಧ ಮಹಿಳೆಯರಿಗೆ ಜನಿಸುವ ಮಕ್ಕಳಿಗೆ ಆರೈಕೆ ಭತ್ಯೆ ಒದಗಿಸುವ ಯೋಜನೆ :**
ಅಂಧ ಮಹಿಳೆಯರು ಮಗುವಿಗೆ ಜನ್ಮ ನೀಡಿದಾಗ ಆ ಮಗುವನ್ನು ಇತರೆ ಸಾಮಾನ್ಯ ತಾಯಂದಿರಂತೆ ಆರೈಕೆ ಮಾಡುವುದು ಕಷ್ಟಕರವಾಗಿರುತ್ತದೆ. ಇಂತಹಅಂಧ ಮಹಿಳೆಯರಿಗೆ ಜನಿಸುವ ಮಕ್ಕಳಿಗೆ ಆರೈಕೆ ಮಾಡಲು ಆಯಾ ಸೇವೆ, ಆರೋಗ್ಯ ಪಾಲನೆ, ಪೌಷ್ಠಿಕ ಆಹಾರ, ಔಷಧೋಪಚಾರಗಳಿಗೆ ಮಾಹೆಯಾನ ರೂ.2000/- ದಂತೆ5 **ವರ್ಷಗಳ** ಅವಧಿಗೆ ಸಹಾಯಧನವನ್ನು ನೀಡಲಾಗುತ್ತಿದೆ.ಈ ಸೌಲಭ್ಯವನ್ನು ಕನಿಷ್ಠ 2 ಮಕ್ಕಳವರೆಗೆ ಪಡೆಯಬಹುದಾಗಿದೆ.

8. **ಶ್ರವಣದೋಷವುಳ್ಳ ವ್ಯಕ್ತಿಗಳಿಗೆ ಸ್ವಯಂ ಉದ್ಯೋಗಕ್ಕಾಗಿ ಹೊಲಿಗೆ ಯಂತ್ರವನ್ನು ವಿತರಿಸುವ ಯೋಜನೆ:-**
ಶ್ರವಣದೋಷವುಳ್ಳವರು ಉದ್ಯೋಗಾವಕಾಶದಿಂದ ವಂಚಿತರಾಗುತ್ತಿರುವುದನ್ನು ಮನಗಂಡು ಅವರು ಸ್ವಯಂ ಉದ್ಯೋಗ ಕೈಗೊಂಡು ಸ್ವಾವಲಂಬಿಗಳಾಗಲು ಅನುವಾಗುವಂತೆ ಶ್ರವಣದೋಷವುಳ್ಳ ವ್ಯಕ್ತಿಗಳಿಗೆ ಸ್ವಯಂ ಉದ್ಯೋಗಕ್ಕಾಗಿ ಹೊಲಿಗೆ ಯಂತ್ರವನ್ನು ವಿತರಿಸಲಾಗುತ್ತಿದೆ.

9. **ಅಂಧ ವಿದ್ಯಾರ್ಥಿಗಳಿಗೆ ಬ್ರೈಲ್ ಕಿಟ್‌ಗಳ ವಿತರಿಸುವಯೋಜನೆ:-**
ಅಂಧ ವಿದ್ಯಾರ್ಥಿಗಳು ತಮ್ಮ ದೈನಂದಿನ ಚಟುವಟಿಕೆಗಳಲ್ಲಿ ಸ್ವಾವಲಂಬಿಗಳಾಗಲು ಅಂಧ ವಿದ್ಯಾರ್ಥಿಗಳಿಗೆ ಟಾಂಕಿಗ್ ಮೊಬೈಲ್, ಬ್ರೈಲ್ ವಾಚ್, ವಾಕಿಂಗ್ ಸ್ಟಿಕ್ ಮತ್ತು ಇನ್ನಿತರ ಸಾಧನೆಗಳನ್ನು ಒಳಗೊಂಡ ತಲಾ ರೂ.25000/-ಗಳ ಕಿಟ್‌ಗಳನ್ನು ವಿತರಿಸಲಾಗುತ್ತಿದೆ.

10. **ಅಂಗವಿಕಲರಿಗೆ ಸಾಧನ ಸಲಕರಣೆಗಳು :**
ಈ ಯೋಜನೆಯಡಿಯಲ್ಲಿ ಅಂಗವಿಕಲರಿಗೆ ಅವಶ್ಯವಾಗಿರುವ ಸಾಧನ ಸಲಕರಣೆಗಳನ್ನು ನೀಡ ಲಾಗುತ್ತಿದೆ. ಫಲಾನುಭವಿಯ ಕುಟುಂಬದ ವಾರ್ಷಿಕ ಆದಾಯ ಮಿತಿಯನ್ನು ಗ್ರಾಮೀಣ ಪ್ರದೇಶದ ಫಲಾನುಭವಿಗಳಿಗೆ ರೂ.11,500/- ಮತ್ತು ನಗರ ಪ್ರದೇಶದ ಫಲಾನುಭವಿಗಳಿಗೆ ರೂ.24,000/- ನಿಗದಿಗೂಳಿಸಲಾಗಿದೆ. ಈ ಯೋಜನೆಯಡಿ ರೂ.15,000/-ಗಳ ಮಿತಿಯೊಳಗೆ ವಿಕಲಚೇತನರಿಗೆ ಅವಶ್ಯವಿರುವ ಗಾಲಿ ಕುರ್ಚಿ, ಸಾದಾ ತ್ರಿಚಕ್ರ ವಾಹನ, ಕ್ಯಾಲಿಪರ್ಸ್, ಕ್ರಚಸ್, ಶ್ರವಣ ಸಾಧನ, ವೈಟ್‌ಕೇನ್, ಬ್ರೈಲ್ ವಾಚ್ ಇನ್ನಿತರ ಸಲಕರಣೆಗಳನ್ನು ಉಚಿತವಾಗಿ ನೀಡಲಾಗುತ್ತಿದೆ.

11. **ಮರಣ ಪರಿಹಾರ ನಿಧಿ ಯೋಜನೆ:**
ಪ್ರಸ್ತುತ ಗ್ರಾಮೀಣ ಪುನರ್ವಸತಿ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಕಾರ್ಯಕರ್ತರು ನಿಧನಹೊಂದಿದ್ದಲ್ಲಿ ರೂ.50,000/-ಗಳ ಪರಿಹಾರಧನ ನೀಡಲು ಅವಕಾಶವಿರುತ್ತದೆ.

## ಅನುಬಂಧ-02

## ವಿವಿಧ ಯೋಜನೆಗಳಡಿ ಪ್ರಯೋಜನ ಪಡೆದ ಫಲಾನುಭವಿಗಳ ವರ್ಷವಾರು ಮತ್ತು ತಾಲ್ಲೂಕುವಾರು ವಿವರ

| ಕ್ರಸಂ | ಯೋಜನೆಗಳ ಹೆಸರು | 2019–20 | | | | | |
|---|---|---|---|---|---|---|---|
| | | ಬೀದರ್ | ಹುಮನಾಬಾದ ಭಾಲ್ಕಿ | ಭಾಲ್ಕಿ | ಔರಾದ | ಬಸವಕಲ್ಯಾಣ | ಒಟ್ಟು |
| 01 | ಆಧಾರಯೋಜನೆ | 06 | 03 | 04 | 03 | 03 | 19 |
| 02 | ಯಂತ್ರಚಾಲಿತ ದ್ವಿಚಕ್ರವಾಹನಯೋಜನೆ | 12 | 06 | 06 | 06 | 06 | 36 |
| 03 | ವಿವಾಹ ಪ್ರೋತ್ಸಾಹಧನಯೋಜನೆ | 05 | 03 | 04 | 03 | 02 | 17 |
| 04 | ಟಾಕಿಂಗ್ ಲ್ಯಾಪ್‌ಟಾಪ್ | 01 | 04 | 01 | 01 | 02 | 09 |
| 05 | ವಿದ್ಯಾರ್ಥಿವೇತನ | 31 | 21 | 17 | 22 | 19 | 110 |
| 06 | ಶುಲ್ಕ ಮರುಪಾವತಿ | 19 | 14 | 09 | 08 | 07 | 57 |
| 07 | ಶಿಶುಪಾಲನಾ ಭತ್ಯೆ | 00 | 00 | 01 | 00 | 00 | 01 |
| 08 | ಹೊಲಿಗೆ ಯಂತ್ರ | 00 | 00 | 00 | 00 | 00 | 00 |
| 09 | ಬ್ರೈಲ್‌ಕಿಟ್ | 00 | 00 | 00 | 00 | 00 | 00 |
| 10 | ಸಾಧನ ಸಲಕರಣೆ | 52 | 26 | 26 | 26 | 26 | 156 |
| 11 | ಮರಣ ಪರಿಹಾರ ನಿಧಿ | 00 | 00 | 00 | 00 | 00 | 00 |
| ಕ್ರಸಂ | ಯೋಜನೆಗಳ ಹೆಸರು | 2020–21 | | | | | |
| | | ಬೀದರ್ | ಹುಮನಾಬಾದ ಭಾಲ್ಕಿ | ಭಾಲ್ಕಿ | ಔರಾದ | ಬಸವಕಲ್ಯಾಣ | ಒಟ್ಟು |
| 01 | ಆಧಾರಯೋಜನೆ | 10 | 05 | 06 | 06 | 05 | 32 |
| 02 | ಯಂತ್ರಚಾಲಿತ ದ್ವಿಚಕ್ರವಾಹನಯೋಜನೆ | 16 | 09 | 08 | 09 | 08 | 50 |
| 03 | ವಿವಾಹ ಪ್ರೋತ್ಸಾಹಧನಯೋಜನೆ | 06 | 04 | 04 | 03 | 03 | 20 |
| 04 | ಟಾಕಿಂಗ್ ಲ್ಯಾಪ್‌ಟಾಪ್ | 01 | 04 | 01 | 01 | 01 | 08 |
| 05 | ವಿದ್ಯಾರ್ಥಿವೇತನ | 57 | 31 | 30 | 27 | 28 | 170 |
| 06 | ಶುಲ್ಕ ಮರುಪಾವತಿ | 23 | 17 | 11 | 11 | 08 | 70 |
| 07 | ಶಿಶುಪಾಲನಾ ಭತ್ಯೆ | 00 | 00 | 01 | 00 | 00 | 01 |
| 08 | ಹೊಲಿಗೆ ಯಂತ್ರ | 04 | 02 | 01 | 01 | 02 | 10 |
| 09 | ಬ್ರೈಲ್‌ಕಿಟ್ | 00 | 00 | 00 | 00 | 00 | 00 |
| 10 | ಸಾಧನ ಸಲಕರಣೆ | 28 | 14 | 14 | 14 | 14 | 84 |
| 11 | ಮರಣ ಪರಿಹಾರ ನಿಧಿ | 00 | 00 | 00 | 00 | 00 | 00 |

| ಕ್ರಸಂ | ಯೋಜನೆಗಳ ಹೆಸರು | 2021–22 | | | | | |
|---|---|---|---|---|---|---|---|
| | | ಬೀದರ್ | ಹುಮನಾಬಾದ ಭಾಲ್ಕಿ | ಭಾಲ್ಕಿ | ಔರಾದ | ಬಸವಕಲ್ಯಾಣ | ಒಟ್ಟು |
| 01 | ಆಧಾರಯೋಜನೆ | 05 | 03 | 03 | 03 | 03 | 17 |
| 02 | ಯಂತ್ರಚಾಲಿತ ದ್ವಿಚಕ್ರವಾಹನಯೋಜನೆ | 12 | 06 | 06 | 06 | 06 | 36 |
| 03 | ವಿವಾಹ ಪ್ರೋತ್ಸಾಹಧನಯೋಜನೆ | 09 | 06 | 05 | 04 | 03 | 27 |
| 04 | ಟಾಕಿಂಗ್ ಲ್ಯಾಪ್‌ಟಾಪ್ | 03 | 08 | 01 | 01 | 01 | 14 |
| 05 | ವಿದ್ಯಾರ್ಥಿವೇತನ | 22 | 16 | 11 | 09 | 12 | 70 |
| 06 | ಶುಲ್ಕ ಮರುಪಾವತಿ | 23 | 09 | 11 | 07 | 08 | 58 |
| 07 | ಶಿಶುಪಾಲನಾ ಭತ್ಯೆ | 00 | 00 | 01 | 00 | 00 | 01 |
| 08 | ಹೊಲಿಗೆ ಯಂತ್ರ | 06 | 03 | 01 | 02 | 02 | 14 |
| 09 | ಬ್ರೈಲ್‌ಕಿಟ್ | 05 | 01 | 03 | 02 | 02 | 13 |
| 10 | ಸಾಧನ ಸಲಕರಣೆ | 32 | 17 | 17 | 16 | 16 | 98 |
| 11 | ಮರಣ ಪರಿಹಾರ ನಿಧಿ | 00 | 00 | 00 | 00 | 00 | 00 |

| ಕ್ರಸಂ | ಯೋಜನೆಗಳ ಹೆಸರು | 2022–23 | | | | | |
|---|---|---|---|---|---|---|---|
| | | ಬೀದರ್ | ಹುಮನಾಬಾದ ಭಾಲ್ಕಿ | ಭಾಲ್ಕಿ | ಔರಾದ | ಬಸವಕಲ್ಯಾಣ | ಒಟ್ಟು |
| 01 | ಆಧಾರಯೋಜನೆ | 00 | 00 | 00 | 00 | 00 | 00 |
| 02 | ಯಂತ್ರಚಾಲಿತ ದ್ವಿಚಕ್ರವಾಹನಯೋಜನೆ | 00 | 00 | 00 | 00 | 00 | 00 |
| 03 | ವಿವಾಹ ಪ್ರೋತ್ಸಾಹಧನಯೋಜನೆ | 00 | 00 | 00 | 00 | 00 | 00 |
| 04 | ಟಾಕಿಂಗ್ ಲ್ಯಾಪ್‌ಟಾಪ್ | 00 | 00 | 00 | 00 | 00 | 00 |
| 05 | ವಿದ್ಯಾರ್ಥಿವೇತನ | 00 | 00 | 00 | 00 | 00 | 00 |
| 06 | ಶುಲ್ಕ ಮರುಪಾವತಿ | 00 | 00 | 00 | 00 | 00 | 00 |
| 07 | ಶಿಶುಪಾಲನಾ ಭತ್ಯೆ | 00 | 00 | 00 | 00 | 00 | 00 |
| 08 | ಹೊಲಿಗೆ ಯಂತ್ರ | 00 | 00 | 00 | 00 | 00 | 00 |
| 09 | ಬ್ರೈಲ್‌ಕಿಟ್ | 00 | 00 | 00 | 00 | 00 | 00 |
| 10 | ಸಾಧನ ಸಲಕರಣೆ | 00 | 00 | 00 | 00 | 00 | 00 |
| 11 | ಮರಣ ಪರಿಹಾರ ನಿಧಿ | 00 | 00 | 00 | 00 | 00 | 00 |